Karunya Baskar
ಕಾರುಣ್ಯಾ ಭಾಸ್ಕರ್

Roshni Ravi
ರೋಶ್ನಿ ರವಿ

Jane Sahi
ಜೇನ್ ಸಾಹಿ

Anu Mothi
ಅನು ಮೋತಿ

# There's Nothing There !
# ಅಲ್ಲಿ ಏನೂ ಇಲ್ಲಾ!



# There's Nothing There !

# ಅಲ್ಲಿ ಏನೂ ಇಲ್ಲಾ!



The creation of this book has been supported by the Bengaluru Sustainability Forum Small Grants Programme under the Suttha Muttha project.

ಈ ಪುಸ್ತಕವನ್ನು ಬೆಂಗಳೂರು ಸಸ್ಟೈನಬಿಲಿಟಿ ಫೋರಮ್- ಸಣ್ಣಅನುದಾನ ಕಾರ್ಯ ಕ್ರಮ (ಸ್ಮಾಲ್ ಗ್ರ್ಯಾಂಟ್ಸ್ ಪ್ರೋಗ್ರಾಮ್) ದ ಬೆಂಬಲದೊಂದಿಗೆ 'ಸುತ್ತ ಮುತ್ತ' ಯೋಜನೆಯಡಿಯಲ್ಲಿ ಹೊರ ತರಲಾಗಿದೆ.

Produced as part of a not-for-profit initiative to introduce children & adults to nature.

ಮಕ್ಕಳು ಹಾಗು ಜನಸಾಮಾನ್ಯರಿಗೆ ಪ್ರಕೃತಿಯನ್ನು ಪರಿಚಯಿಸುವ ಲಾಭ-ರಹಿತ ಕಾರ್ಯಕ್ರಮದ ಅಂಗವಾಗಿ ಇದನ್ನು ತಯಾರಿಸಲಾಗಿದೆ.

**Concept & Story:**
Roshni Ravi, Jane Sahi, Karunya Baskar

**ಕಥೆ- ಪರಿಕಲ್ಪನೆ:**
ರೋಶ್ನಿ ರವಿ, ಜೇನ್ ಸಾಹಿ, ಕಾರುಣ್ಯಾ ಭಾಸ್ಕರ್

**Illustration & Design:**
Karunya Baskar

**ಚಿತ್ರಕಲೆ - ವಿನ್ಯಾಸ:**
ಕಾರುಣ್ಯಾ ಭಾಸ್ಕರ್

**Kannada Text:**
Anu Mothi, Maadhyama Aneka Pvt. Ltd.

**ಕನ್ನಡಕ್ಕೆ:**
ಅನು ಮೋತಿ, ಮಾಧ್ಯಮ ಅನೇಕ ಪ್ರೈ. ಲಿ.

**This work is licensed to Nature Classrooms under CC BY-NC-ND 4.0**

ಈ ಪುಸ್ತಕದ ಪರವಾನಿಗೆಯನ್ನು ನೇಚರ್ ಕ್ಲಾಸ್ ರೂಮ್ಸ್ ಗೆ CC BY-NC-ND 4.0 ಮೂಲಕ ನೀಡಲಾಗಿದೆ.

Published 2023
ಪ್ರಕಟಣೆ 2023

https://www.natureclassrooms.org/
https://www.bengalurusustainabilityforum.org/

BENGALURU SUSTAINABILITY FORUM

Nature Classrooms

Maadhyama Aneka
ಮಾಧ್ಯಮ ಅನೇಕ

nature conservation foundation

This book is dedicated to the children and teachers of the Government Lower Primary School, Tarabanahalli, Bengaluru Rural, Karnataka.

ಈ ಪುಸ್ತಕ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ತರಬನಹಳ್ಳಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಕರ್ನಾಟಕ ಇದರ ಮಕ್ಕಳು ಮತ್ತು ಅಧ್ಯಾಪಕರುಗಳಿಗೆ ಸಮರ್ಪಣೆ.

We wish you joyous encounters on your walks!

ನಿಮ್ಮ ಸುತ್ತಾಟಗಳಲ್ಲಿ ಖುಷಿ ಕೊಡುವ ಭೇಟಿಗಳು ನಿಮಗೆ ದೊರೆಯಲೆಂದು ಹಾರೈಸುತ್ತೇವೆ!




Arali is waiting for Amma to pick her up from school today.


ಶಾಲೆ ಮುಗಿದ ಮೇಲೆ ಅರಳಿ ತನ್ನ ಅಮ್ಮನಿಗಾಗಿ ಕಾಯುತ್ತಿದ್ದಳು.






Arali! What are you doing?
ಅರಳಿ! ಏನು ಮಾಡುತ್ತಿದ್ದೀಯಾ?




Let's go!
ಬಾ ಹೋಗೋಣ!
Bye!
ಟಾಟಾ!
Bye!
ಟಾಟಾ!


What are you staring at?
There's nothing there!
ಅಲ್ಲೇನು ನೋಡುತ್ತಿದ್ದೀಯಾ?
ಅಲ್ಲಿ ಏನೂ ಇಲ್ಲಾ!


Hurry up!
ಹೊತ್ತಾಯ್ತು ನಡಿ!




Arali is enjoying
watching the leaves of the
touch-me-not plant close.

ಅರಳಿಗೆ ಮುಟ್ಟಿದರೆ ಮುನಿ ಗಿಡದ
ಎಲೆಗಳು ಸುರುಟಿಕೊಳ್ಳುವುದನ್ನು
ನೋಡಲು ತುಂಬಾ ಖುಷಿ.






Arali meets many
creatures on her
way home.

ಮನೆಗೆ ಹೋಗುವ ದಾರಿಯಲ್ಲಿ
ಅರಳಿ ಅನೇಕ ಪ್ರಾಣಿಗಳನ್ನು
ನೋಡುತ್ತಾಳೆ.








What are you looking at?
ಅಲ್ಲೇನು ನೋಡುತ್ತಿದ್ದೀಯಾ?
?
Arali is staring at the grey wall. Something is moving. Is it... a dragonfly?
ಅರಳಿ ಬೂದುಬಣ್ಣದ ಗೋಡೆಯನ್ನೇ ದಿಟ್ಟಿಸಿ ನೋಡುತ್ತಿದ್ದಾಳೆ. ಗೋಡೆಯ ಸಣ್ಣ ಭಾಗವೊಂದು ಅಲ್ಲಾಡುತ್ತಿರುವಂತೆ ಕಾಣುತ್ತಿದೆ. ಅದೊಂದು ಏರೋಪ್ಲೇನ್ ಚಿಟ್ಟೆ!



Arali and Amma are both looking inside the drain.

ಅರಳಿ ಮತ್ತು ಅಮ್ಮ ಇಬ್ಬರೂ ಕಾಲುವೆಯೊಳಗೆ ಬಗ್ಗಿ ನೋಡುತ್ತಿದ್ದಾರೆ.





Arali and Amma meet a tree sleeping by the roadside. Arali is wondering how wide the tree trunk is.

ಹೀಗೆ ನಡೆಯುತ್ತಾ ಸಾಗಿದಾಗ, ಅರಳಿ ಮತ್ತು ಅಮ್ಮ ರಸ್ತೆ ಬದಿಯಲ್ಲಿ ಮಲಗಿದ್ದ ಮರವೊಂದನ್ನು ಭೇಟಿ ಮಾಡುತ್ತಾರೆ. ಆ ಮರದ ಕಾಂಡ ಎಷ್ಟು ಅಗಲವಿರಬಹುದೆಂದು ಅರಳಿ ಯೋಚಿಸುತ್ತಾಳೆ.


Keeekeeekii kiii ki keeee
ಕಿಇಇಇಇಇ ಕಿಇಇಇ ಕೀ ಕಿಇಇಇಇಇ
Whrrrr
ವ್ಹರ್ರ್ರ್
ಗೂಊ ಗೂಊ
coo-coo
Amma, look up!
ಅಮ್ಮ, ನೋಡಲ್ಲಿ!
chiz- zit
chiz- zit
ಚೀಜ್ ಝಿಟ್
ಚೀಜ್ ಝಿಟ್


ಕಿಇಇಇಇಇಇ ಕಿಇಇಇಇ ಕೀ ಕಿಇಇಇಇಇ
keeekeeekii kiii ki keeee
cooo cooo cooo
ಗೂಊ ಗೂಊ



Arali is going to buy a pencil from the shop.

ಅರಳಿ ಒಂದು ಪೆನ್ಸಿಲ್ ಕೊಂಡುಕೊಳ್ಳಲು ಅಂಗಡಿಗೆ ಹೋಗುತ್ತಾಳೆ.







Amma meets a new friend.

ಅಮ್ಮನಿಗೆ ಒಂದು ಹೊಸ ಪರಿಚಯವಾಗುತ್ತದೆ.


I wonder what Amma is looking at?
ಅಮ್ಮ ಏನು ನೋಡುತ್ತಿದ್ದಾಳೆ?





The koels call.
Ku-hoo, ku-hoo, ku-oooo.

ಕೋಗಿಲೆಗಳು ಕೂಗುತ್ತಿವೆ.
ಕುಹೂ, ಕುಹೂ, ಕೂವೂ.

A pair of parakeets look
out from their tree-home.

ಒಂದು ಜೋಡಿ ಗುಲಾಬಿ
ಕೊರಳಿನ ಗಿಳಿಗಳು ತಮ್ಮ ಮರದ
ಗೂಡಿನಿಂದ ಹೊರಗೆ ಇಣುಕುತ್ತಿವೆ.




The peepal leaves begin to dance in the wind, making their own music- pata-pata-pata.

ಅರಳಿಮರದ ಎಲೆಗಳು ತಮ್ಮದೇ ಪಟ-ಪಟ-ಪಟ ಸಂಗೀತ ಮಾಡುತ್ತಾ, ಗಾಳಿಯಲ್ಲಿ ನೃತ್ಯ ಮಾಡುತ್ತಿವೆ.


Amma, what are you looking at? There's nothing there!
ಅಮ್ಮ ಅಲ್ಲಿ ಏನು ನೋಡುತ್ತಿದ್ದೀಯಾ? ಅಲ್ಲಿ ಏನೂ ಇಲ್ಲಾ!

# SPOT ME!
# ಕಂಡು ಹಿಡಿಯಿರಿ!

Arali and Amma met many plants and creatures on their way home.

ಅರಳಿ ಮತ್ತು ಅಮ್ಮ ಶಾಲೆಯಿಂದ ಮನೆಗೆ ಹೋಗುವ ದಾರಿಯಲ್ಲಿ ಹಲವಾರು  ಗಿಡ-ಮರ, ಪ್ರಾಣಿ-ಪಕ್ಷಿಗಳನ್ನು ನೋಡಿದರು.

## Weaver Ants

Weaver ants live in trees. Many ants work together to bend, pull and attach individual leaves together to build a leaf nest. Try to spot a weaver ant nest the next time you go for a walk!




## ದರ್ಜಿ ಇರುವೆಗಳು

ದರ್ಜಿ ಇರುವೆಗಳು ಮರಗಳ ಮೇಲೆ ವಾಸಿಸುತ್ತವೆ. ಹಲವು ಇರುವೆಗಳು ಸೇರಿ ಒಂದೊಂದೇ ಎಲೆಯನ್ನು ಬಾಗಿಸಿ, ಎಳೆದು, ಒಂದಕ್ಕೊಂದು ಅಂಟಿಸಿ ಎಲೆಗಳ ಗೂಡನ್ನು ಕಟ್ಟುತ್ತವೆ. ಮುಂದಿನ ಸಾರಿ ನೀವು ಸುತ್ತಾಡಲು ಹೋದಾಗ ದರ್ಜಿ ಇರುವೆಗಳ ಗೂಡನ್ನು ಹುಡುಕಿ.

## Spiders

Spiders are creatures with eight legs and many eyes. Arali meets many spiders on her walk home. Say hello to the spiders you share your home and school with!



## ಜೇಡಗಳು

ಜೇಡಗಳು ಎಂಟು ಕಾಲುಗಳು ಮತ್ತು ಅನೇಕ ಕಣ್ಣುಗಳಿರುವ ಜೀವಿಗಳು. ಅರಳಿ ಮನೆಗೆ ಹೋಗುವ ದಾರಿಯಲ್ಲಿ ಹಲವು ರೀತಿಯ ಜೇಡಗಳನ್ನು ಭೇಟಿಮಾಡುತ್ತಾಳೆ. ನಿಮ್ಮ ಮನೆಯಲ್ಲಿ ಮತ್ತು ಶಾಲೆಯಲ್ಲಿ ಕಂಡುಬರುವ ಜೇಡಗಳಿಗೆ ಹಲೋ ಎಂದು ಹೇಳಿ!

## Granite Ghost Dragonfly

The granite ghost dragonfly is black, grey and white and its superpower is becoming almost invisible when it is resting on a rock or a wall! Have you spotted any other creatures that disappear into their surroundings?



## ಏರೋಪ್ಲೇನ್ ಚಿಟ್ಟೆಗಳು

ಏರೋಪ್ಲೇನ್ ಚಿಟ್ಟೆಗಳು ಕಪ್ಪು, ಬೂದು ಮತ್ತು ಬಿಳಿ ಬಣ್ಣದ್ದಾಗಿದ್ದು ಅವುಗಳ ಮಾಯಾಶಕ್ತಿ ಏನೆಂದರೆ  ಗೋಡೆ ಅಥವಾ ಬಂಡೆಯ ಮೇಲೆ ಅವು ಕುಳಿತಾಗ ಕಣ್ಣಿಗೆ ಸುಲಭವಾಗಿ ಕಾಣಿಸುವುದಿಲ್ಲ. ಇದೇ ರೀತಿ, ಕಣ್ಣಿಗೆ ಕಾಣದಂತಿರುವ ಬೇರೆ ಪ್ರಾಣಿ - ಪಕ್ಷಿಗಳನ್ನು ನಿಮ್ಮ ಸುತ್ತಮುತ್ತ ಕಂಡಿದ್ದೀರಾ?

Birds are all around us. Match the fascinating facts below to the right birds.

ಪಕ್ಷಿಗಳು ನಮ್ಮ ಸುತ್ತಮುತ್ತಲೂ ಸದಾ ಕಂಡುಬರುತ್ತವೆ. ಕೆಳಗಿನ ವಿಶೇಷ ಸಂಗತಿಗಳನ್ನು ಮತ್ತು ಆಯಾ ಪಕ್ಷಿಗಳ ಹೆಸರನ್ನು ಹೊಂದಿಸಿ ಬರೆಯಿರಿ.



**Indian Roller**
**ನೀಲಕಂಠ ಪಕ್ಷಿ**



**Black Kite**
**ಹದ್ದು**



**Rose-ringed Parakeet**
**ಗುಲಾಬಿಕೊರಳಿನ ಗಿಳಿ**

---

This bird nests in a hole in a tree.
It has a sharp, screeching call - kreeh kreeh kreeh!

ಈ ಪಕ್ಷಿ ಮರದ ಪೊಟರೆಯಲ್ಲಿ ಅಥವಾ ಕಟ್ಟಡಗಳ ಗೋಡೆಗಳಲ್ಲಿ ಗೂಡು ಕಟ್ಟುತ್ತದೆ. ಇದರ ಕೂಗು ಕೇಳಲು ಕೀರಲು - ಕ್ರೀಹ್ ಕ್ರೀಹ್ ಕ್ರೀಹ್ ಕ್ರೀಹ್!

The state bird of Karnataka, Telangana, and Odisha!

ಇದು ಕರ್ನಾಟಕ, ತೆಲಂಗಾಣ, ಒಡಿಸ್ಸಾ ರಾಜ್ಯಗಳ ರಾಜ್ಯಪಕ್ಷಿ!

A bird that loves to glide and soar in the sky.

ಈ ಪಕ್ಷಿಗೆ ಆಕಾಶದಲ್ಲಿ ಎತ್ತರೆತ್ತರಕ್ಕೆ ಹಾರಾಡಲು ಬಲು ಇಷ್ಟ.

## Ashwath Katte


Have you seen an ashwath katte
near your school or home?

A platform built around a peepal
and neem tree, ashwath kattes
are common in cities and villages
of Karnataka. You can spot many
creatures here - squirrels, koels, ants
and also people resting, talking or
selling their wares.

## ಅಶ್ವತ್ಥ ಕಟ್ಟೆ

ನಿಮ್ಮ ಶಾಲೆ ಅಥವಾ ಮನೆಯ ಹತ್ತಿರ
ಅಶ್ವತ್ಥ ಕಟ್ಟೆ ನೋಡಿದ್ದೀರಾ?

ಅರಳಿ ಮತ್ತು ಬೇವಿನ ಮರಗಳ ಸುತ್ತಲೂ ಕಟ್ಟಿದ
ಅಶ್ವತ್ಥಕಟ್ಟೆಗಳು ಕರ್ನಾಟಕದ ಪಟ್ಟಣಗಳಲ್ಲಿ, ಹಳ್ಳಿಗಳಲ್ಲಿ
ಸಾಧಾರಣವಾಗಿ ಕಂಡುಬರುತ್ತವೆ. ಅಲ್ಲಿ ನೀವು ಅಳಿಲು,
ಕೋಗಿಲೆ, ಇರುವೆಗಳಂತಹ ಹಲವಾರು ಪ್ರಾಣಿ - ಪಕ್ಷಿಗಳನ್ನು
ನೋಡಬಹುದು, ಅಲ್ಲದೆ ಆ ಕಟ್ಟೆಗಳ ಮೇಲೆ ಮಾತನಾಡುತ್ತಾ
ಕುಳಿತಿರುವ, ವಿಶ್ರಾಂತಿ ಪಡೆಯುತ್ತಿರುವ, ಅಥವಾ ವ್ಯಾಪಾರ
ಮಾಡುತ್ತಿರುವ ಜನರನ್ನು ನೋಡಬಹುದು.



Which creatures and plants do you meet
on walks near your school or home?
Draw or make notes to
remember these meetings.

ನಿಮ್ಮ ಶಾಲೆ ಅಥವಾ ಮನೆಯ ಹತ್ತಿರ
ಓಡಾಡುವಾಗ ನೀವು ಯಾವ ಯಾವ ಪ್ರಾಣಿ
- ಪಕ್ಷಿ, ಗಿಡ-ಮರಗಳನ್ನು ಭೇಟಿ ಮಾಡಿದ್ದೀರಿ?
ಆ ಭೇಟಿಗಳನ್ನು ನೆನಪಿಟ್ಟುಕೊಳ್ಳಲು ಅವುಗಳ
ಚಿತ್ರಗಳನ್ನು ಬರೆದಿಟ್ಟುಕೊಳ್ಳಿ ಅಥವಾ
ಟಿಪ್ಪಣಿಗಳನ್ನು ಮಾಡಿಟ್ಟುಕೊಳ್ಳಿ.

# About the Creators

Instagram & Twitter
@karunyakaun

## Jane ಜೇನ್

Jane has worked with children and stories for many years in different ways. At present she is involved in a small programme in two government primary schools on the outskirts of Bengaluru  on language, nature and art.

ಜೇನ್ ಅವರು ಅನೇಕ ವರ್ಷಗಳಿಂದ ಮಕ್ಕಳು ಮತ್ತು ಮಕ್ಕಳ ಕಥಾಲೋಕದಲ್ಲಿ ಹಲವಾರು ರೀತಿಯ ಚಟುವಟಿಕೆಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಬಂದಿದ್ದಾರೆ. ಪ್ರಸ್ತುತ ಇವರು ಬೆಂಗಳೂರಿನ ಹೊರವಲಯದಲ್ಲಿರುವ ಎರಡು ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಭಾಷೆ, ನಿಸರ್ಗ ಮತ್ತು ಕಲೆಯ ಕುರಿತಾದ ಒಂದು ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದಾರೆ.

## Karunya ಕಾರುಣ್ಯಾ

Karunya is a Visual Designer and Illustrator from Mumbai. She is passionate about nature, education, and anything that gives her an excuse to stay outdoors.

ಮುಂಬೈ ಮೂಲದ ಕಾರುಣ್ಯಾ ವೃತ್ತಿಯಲ್ಲಿ ವಿಷುಯಲ್ ಡಿಸೈನರ್ ಮತ್ತು ಇಲ್ಲಸ್ಟ್ರೇಟರ್. ಪ್ರಕೃತಿ ಮತ್ತು ಶಿಕ್ಷಣ ಕ್ಷೇತ್ರಗಳಲ್ಲಿ ಅತ್ಯಂತ ಒಲವಿರುವ ಕಾರುಣ್ಯಳಿಗೆ ಹೊರಾಂಗಣದಲ್ಲಿ ತನ್ನನ್ನು ತೊಡಗಿಸಿಕೊಳ್ಳಲು ಬಲವಾದ ಕಾರಣಗಳೇ ಬೇಕೆಂದೇನಿಲ್ಲಾ !

## Roshni ರೋಶ್ನಿ

Roshni enjoys conversations about teaching-learning. She loves meeting trees in her neighbourhood and long walks with her dog.

ರೋಶ್ನಿ ಅವರಿಗೆ ಬೋಧನೆ-ಕಲಿಕೆ ಕ್ಷೇತ್ರದಲ್ಲಿ ಮತ್ತು ಅದರ ಕುರಿತು ಮಾಡುವ ಸಂವಾದಗಳಲ್ಲಿ ಅಪಾರ ಆಸಕ್ತಿಯಿದೆ. ತನ್ನ ನೆರೆಹೊರೆಯಲ್ಲಿ ಬೆಳೆದಿರುವ ಮರಗಳನ್ನು ಭೇಟಿಯಾಗಲು ಮತ್ತು ತನ್ನ ನಾಯಿಯೊಂದಿಗೆ ವಾಯುವಿಹಾರ ಹೋಗಲು ಅವರು ಇಷ್ಟಪಡುತ್ತಾರೆ.

## Anu ಅನು

Anu is an entrepreneur and content creator who loves nature.

ಅನು - ವಾಣಿಜ್ಯೋದ್ಯಮಿ ಮತ್ತು ಕಂಟೆಂಟ್ ಕ್ರಿಯೇಟರ್. ಪ್ರಕೃತಿಯೆಂದರೆ ತುಂಬ ಪ್ರೀತಿ.

## Acknowledgements

Special thanks to the BSF and NCF teams for their support; Sarojini Hegde, Gousia Taj, Vena Kapoor and Labonie Roy for conversations and sharing the excitement for this book; and Samarth Bhagwat, Advait Bhat, Aarcha Suresh for help with design.

## ಆಭಾರ ಮನ್ನಣೆ

ಬಿ ಎಸ್ ಎಫ್ ಮತ್ತು ಎನ್ ಸಿ ಎಫ್ ಪರಿವಾರಗಳ ಬೆಂಬಲಕ್ಕೆ ವಿಶೇಷ ಧನ್ಯವಾದಗಳು; ಈ ಸಂಪನ್ಮೂಲ ರೂಪುಗೊಳ್ಳುವ ಸಮಯದಲ್ಲಿ ಮಹತ್ವಪೂರ್ಣ ಸಲಹೆ, ತಿಳುವಳಿಕೆಗಳನ್ನು ನೀಡಿ ಬೆಂಬಲಿಸಿದ ಸರೋಜಿನಿ ಹೆಗ್ಡೆ. ಗೌಸಿಯಾ ತಾಜ್, ವೆನಾ ಕಪೂರ್ ಮತ್ತು ಲ್ಯಾಬೋನಿ ರಾಯ್ ಇವರಿಗೆ ವಿಶೇಷ ಧನ್ಯವಾದಗಳು; ಜೊತೆಗೆ ವಿನ್ಯಾಸ ರಚನೆಯಲ್ಲಿ ನೆರವಾಗಿದ್ದಕ್ಕೆ ಸಮರ್ಥ್ ಭಾಗವತ್, ಅದ್ವೈತ್ ಭಟ್, ಆರ್ಚ ಸುರೇಶ್ ಅವರಿಗೆ ವಿಶೇಷ ಧನ್ಯವಾದಗಳು.







Amma comes to pick up Arali from school. On their way home, Arali makes many stops. Who does Arali meet on her walk? Join her to see who you can spot!

ಅಮ್ಮ ಅರಳಿಯನ್ನು ಶಾಲೆಯಿಂದ ಕರೆದುಕೊಂಡು ಹೋಗಲು ಬಂದಿದ್ದಾಳೆ. ಮನೆಗೆ ಹೋಗುವ ಹಾದಿಯಲ್ಲಿ ಅರಳಿ ಹಲವು ಕಡೆ ನಿಲ್ಲುತ್ತಾಳೆ. ಅರಳಿ ತನ್ನ ಹಾದಿಯಲ್ಲಿ ಯಾರು ಯಾರನ್ನು ಭೇಟಿ ಮಾಡುತ್ತಾಳೆ ಎಂದು ಅವಳೊಂದಿಗೆ ನೀವು ಕೂಡ ಸಾಗಿ ಕಂಡುಹಿಡಿಯಿರಿ!

BENGALURU SUSTAINABILITY FORUM

Nature Classrooms

Maadhyama Aneka
ಮಾಧ್ಯಮ ಅನೇಕ

nature conservation foundation